ಗುಂಡ್ಲುಪೇಟೆ ತಾಲ್ಲೂಕು ಗೋಪಾಲಪುರ ಗ್ರಾಮದ ಬಳಿ ಕೆರೆ ನಿರ್ಮಾಣ.

184 (45)

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್ (ಗುಂಡ್ಲುಪೇಟೆ): ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಗುಂಡ್ಲುಪೇಟೆ ತಾಲ್ಲೂಕು ಗೋಪಾಲಪುರ ಗ್ರಾಮದ ಬಳಿ ಕೆರೆ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆಯೇ?

2) ಹಾಗಿದ್ದಲ್ಲಿ ಇದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು ಮತ್ತು ಇದರಿಂದ ಎಷ್ಟು ಎಕರೆ ಭೂಮಿಗೆ ನೀರಾವರಿ ಆಗುತ್ತದೆ?

3) ಈವರೆಗೆ ನಡೆದಿರುವ ಕೆಲಸವೆಷ್ಟು

4) ಇದನ್ನು ಯಾವಾಗ ಕೆಲಸ ಪೂರ್ಣಗೊಳಿಸಲಾಗುತ್ತದೆ?

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು):

1) ಹೌದು.

2) ಈ ಕಾಮಗಾರಿಯ ಅಂದಾಜು ಮೊತ್ತ ರೂ.77-00 ಲಕ್ಷಗಳು. ಈ ಯೋಜನೆಯಿಂದ 72.84 ಹೆಕ್ಟೇರು ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ.

3 ಮತ್ತು 4) ಈವರೆಗೆ (2/2000) ರೂ. 16.98 ಲಕ್ಷಗಳ ಪ್ರಗತಿ ಸಾಧಿಸಲಾಗಿದೆ. ಈ ಕಾಮಗಾರಿಯನ್ನು ಮಾರ್ಚಿ 2001ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.

ಬೆಂಗಳೂರಿನ ಕೆ.ಆರ್.ಮಾರುಕಟ್ಟೆ ಕಟ್ಟಡ ಕುರಿತು.

185 (270)

ಶ್ರೀ ಪಿ.ಸಿ.ಮೋಹನ್, (ಚಿಕ್ಕಪೇಟೆ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಕೆ.ಆರ್.ಮಾರುಕಟ್ಟೆಯ ಹೊಸ ಕಟ್ಟಡದ ಗುತ್ತಿಗೆದಾರರು

ಯಾರು? ಹಾಗೂ ಆ ಸಂಸ್ಥೆಯ ಹೆಸರೇನು?

ಆ) ಸದರಿ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಲಾಗಿದೆಯೇ?

ಇ) ಹಾಗಿದ್ದಲ್ಲಿ, ಕಪ್ಪು ಪಟ್ಟಿಗೆ ಸೇರಿಸಲು ಕಾರಣಗಳೇನು? ಈಗ ಬೆಂಗಳೂರಿನಲ್ಲಿನ ಮಹಾನಗರ ಪಾಲಿಕೆಯ ಯಾವ ಯಾವ ಕಾಮಗಾರಿಗಳನ್ನು ಇವರಿಗೆ ವಹಿಸಲಾಗಿದೆ? ವಿವರ ನೀಡುವುದು.

ಈ) ಸದರಿ ಸಂಸ್ಥೆಯವರಿಗೆ ನೀಡಲಾದ ಬೆಂಗಳೂರು ಮಹಾನಗರ ಪಾಲಿಕೆಯ ಕಾಮಗಾರಿಗಳು ಯಾವುವು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು):

ಅ) ಬೆಂಗಳೂರಿನ ಕೆ.ಆರ್.ಮಾರುಕಟ್ಟೆಯ ಹೊಸ ಕಟ್ಟಡದ ಗುತ್ತಿಗೆದಾರರು ಮೆ: ಶ್ಯಾಮರಾಜು ಮತ್ತು ಕಂಪೆನಿ.

ಆ) ಇಲ್ಲ.

ಇ ಮತ್ತು ಈ) ಅನ್ವಯಿಸುವುದಿಲ್ಲ. ಬೆಂಗಳೂರು ಮಹಾನಗರ ಪಾಲಿಕೆಯ ಸದರಿ ಗುತ್ತಿಗೆದಾರರಿಗೆ ಈ ಕೆಳಕಂಡ 2 ಕಾಮಗಾರಿಗಳನ್ನು ವಹಿಸಿದೆ:

1) ಮೇಖ್ರಿ ವೃತ್ತದಲ್ಲಿ ಗ್ರೇಡ್ ಸೆಪರೇಟರ್ ನಿರ್ಮಾಣ.

2) ಅಕ್ಕಿತಿಮ್ಮನಹಳ್ಳಿಯಲ್ಲಿ ಜಂಟಿ ಯೋಜನೆಯಡಿಯಲ್ಲಿ ವಾಣಿಜ್ಯ ಸಂಕೀರ್ಣದ ನಿರ್ಮಾಣ.

ಬಿ.ಡಿ.ಎ ನಿವೇಶನಗಳ ಹಂಚಿಕೆ.

186 (289)

ಶ್ರೀ ಪಿ.ಸಿ.ಮೋಹನ್ (ಚಿಕ್ಕಪೇಟೆ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿವೇಶನ ಹಂಚಿಕೆದಾರರು 10 ವರ್ಷಗಳೊಳಗೆ ತಮ್ಮ ನಿವೇಶನದಲ್ಲಿ ಮನೆ ನಿರ್ಮಾಣ ಮಾಡದ ಪ್ರಯುಕ್ತ ಪ್ರಾಧಿಕಾರವು ವಿಧಿಸುತ್ತಿರುವ ದುಬಾರಿಯಾದ ಶುಲ್ಕವನ್ನು ಸಂದಾಯ ಮಾಡುವ ಸಂಕಟ ಪರಿಸ್ಥಿತಿಯಲ್ಲಿದ್ದಾರೆ ಎಂಬುದು ಸರ್ಕಾರದ